

ಹೀಗೆ ಮಕ್ಕು ಮರಿ ಆಗಿ, ಕಷ್ಟದ ದಿನಗೋಳೆಲ್ಲಾ ಕಳದೋ, ಇನ್ನಾರ ನೆಮ್ದಿಯಾಗಿ ಉಸುರುಯ್ಯಳನ ಅನ್ನೋ ಸಮಾಧಾನದಲ್ಲಿ ಸಂಸಾರವನ್ನು ನೀಸುತ್ತಿದ್ದ ಗಂಗಮಾಳಕ್ಕನ ಮೇಲೆ ಬರಸಿಡಿಲೊಂದು ಬಂದೆರಗಿತ್ತು. ನಿಸೂರ್ನೆ ಇರ್ಲಾರ್ದೆ ಇರ್ವೆ ಬುಟ್ಕಂಡ್ರು ಅನ್ನಂಗೆ, 'ಸ್ವಲ್ಪದಿನ ತಿನ್ಕಂಡ್ ಉಣ್ಕಂಡ್ ಚೆನ್ನಾಗಿರ್ಲಿ, ಮೈನೆರ್ದವ್ಳೆ ಮಾಡಿಕ್ತಿನಿ, ಗುಂಡುಗುಂಡಗಿದ್ರೆ ಗಂಡುಡ್ಕದೂ ಸುಲ್ಬಾತದೆ' ಅಂತ ತನ್ನ ಕೊನೆಯ ತಂಗಿಯನ್ನು ಮನೆಗೆ ಕರ್ಕಂಬಂದ್ ಇಟ್ಕಂಡ್ಳು. ಅವಳು ಗುಂಡುಗುಂಡಗಾಗಿದ್ದಲ್ದೆ ಇವಳ ಗಂಡನನ್ನೇ ಒಳಿಕಾಕ್ಕಂಬುಟ್ಲು. ಒಂದು ದಿನ ಇವಳ ಗಂಡ ಅವಳನ್ನೂ ತಾನೇ ಮದುವೆ ಆಗ್ತೀನಂತ ಎದೆಸೆಟೆಸಿ ನಿಂತು ಹೇಳಿದ್ದ. ಇವಳು ಕುಗ್ಗಿ ಹೋಗಿದ್ದಳು. ಅವತ್ತು ಅವಳಲ್ಲಿ ಹೆಪ್ಪುಗಟ್ಟಿದ ನೋವು ಇಡೀ ಜೀವನಕ್ಕೆ ಆಗುವಷ್ಟು.

ಎರಡನೆಯವಳೋ ಮದುವೆಯಾಗಿದ್ದೇ ಆಗಿದ್ದು ಊರ್ಮುಂದ್ಲು ಕೆರೇಲಿ ಹಸಿರು ಆವಸೆ ಆವರುಸ್ಕಂಡಿರ್ತದಲ್ಲಾ ಹಂಗೆ ಇವಳ ಸಂಸಾರನ ಆವರಿಸಿಕೊಂಡಳು. ಅವತ್ತಿನಿಂದ ತಾನಾಯಿತು ತನ್ನ ಮಕ್ಕಳಾಯಿತು ಅಂತ ಬಾಯಿ ಕಳೆದುಕೊಂಡು ಬದುಕತೊಡಗಿದಳು ಗಂಗಮಾಳಕ್ಕ. ಅಡುಗೆಮನೆಯ ಪೂರ್ಣ ಹತೋಟಿಯನ್ನ ಎರಡನೆಯವಳೇ ತಗಂಡಳು, ಇವಳದು ಮನೆಯ ಹೊರಗಿನ ಕೆಲಸ, ಕಸ ಮುಸುರೆ, ತೋಟದ ಕೆಲಸ, ನೆಂಟರ ಮನೆಯ ಕೆಲಸ ಇಷ್ಟಾಯಿತು.

ಬೆಳೆದ ಮಕ್ಕಳು ಬುದ್ಧಿ ಬಂದಮೇಲೆ ಒಂದು ದಿನ ಗಂಗಮಾಳಕ್ಕನ ಎದುರು ನಿಂತು ಕೇಳಿದ್ದರು: 'ಅಲ್ಲ ಕಣಕ್ಕ, ನಿನ್ ಬುದ್ಧಿಗೇನ್ ಮಂಕ್ ಬಡ್ದಿತ್ತ. ವತ್ಗಂಡ್ ಕುತ್ಕಳಕೆ ಹೆಂಗ್ ಬಿಟ್ಟೆ ಇನ್ನೊಬ್ಳಿಗೆ ಜಾಗನ?' ಅಂತ. ಆಗ ಕಣ್ಣೀರಾಗಿ ಹೇಳಿದ್ದಳು: 'ಗಂಡ್ಸಾಗ್ಲಿ ಹೆಂಗ್ಸಾಗ್ಲಿ ಒಂದ್ಕಿತ ನಂಬ್ದೋರ್ಗೆ ಮೋಸ ಮಾಡ್ಬೇಕು ಅಂತ ನಿರ್ಧಾರ ಮಾಡಿದ್ಮೇಲೆ, ಅವರು ನಮ್ಗೆ ಬೇಕೇ ಅಂತ ಚಂಡಿ ಇಡ್ಕಂಡ್ ಕುತ್ಗಳದ್ರಲ್ಲಿ ಅರ್ಥ ಇಲ್ಲ ಕಣ್ ತಗ. ನಾನು ಏನ್ ಸುಂಕಿರ್ಲಿಲ್ಲ, ಅವುರ್ನ ನಂಗ್ ಮೋಸ ಮಾಡ್ಬೇಡಿ, ಮಕ್ಳು ಬಾಯ್ಗೆ ಮಣ್ಣಾಕ್ಬೇಡಿ ಅಂತ ಕಾಡ್ದೆ ಬೇಡ್ದೆ. ಅವುಳ್ನೂ ನಿಂಗೆ ಚಿಕ್‌ವಯ್ಸು ಕಣೇ, ನಿನ್ ಜೀವ್ನನೂ ಹಾಳ್ಮಾಡ್ಕಂಡು ನನ್ ಬಾಳ್ಗೂ ಬೆಂಕಿ ಇಡ್ಬೇಡ ಅಂದೆ. ಬೈದೆ, ಹೊಡ್ದೆ. ಅಪ್ಪುಂಗೆ ದೂರೇಳಿ ಊರಿಗ್ ಕರ್ಕಂಡೋಗಿ ಅಂದೆ. ನಮ್ಮಪ್ಪ ಎಂಗೋ ಒಬ್ಳು ಮಗ್ಳು ಮದ್ವೆ ಮಾಡದೇ ತಪ್ಪು ಅನ್ನತರ ಇವಳ್ನ ನಿನ್ ಗಂಡುನ್ ಬಿಟ್ರೆ ಇನ್ಯಾರ್ ಮದ್ವೆ ಆಯ್ತರೆ ಅಂದ್ಬುಟ್ಟ. ನನ್ ಪರ್ವಾಗ್ ಮಾತಾಡಕೆ ಒಬ್ರೂ ತಯಾರಾಗ್ಲಿಲ್ಲ. ಕೊನಿಗರ ಎರ್ಡ್ ಮಕ್ಳುನೂ ಕರ್ಕಂಡು ತೊರೆಹಳ್ಳುಕ್ ಬೀಳನಾ ಅಂತ ಹೋಗಿದ್ದೆ. ಅಲ್ಲಿ ಹಳ್ಳುಕ್ಕೆ ಸೇತ್ವೆ ಕಟ್ತಾ ಇದ್ರು. ಇನ್ನೇನು ಮಕ್ಳುನು ತಳ್ಳಿ ನಾನೂ ಬೀಳ್ಬೇಕು ಅಂತಿದ್ದೆ ಅಷ್ಟ್ರಾಗೆ ಅಲ್ಲಿದ್ದ ಮೇಸ್ತ್ರಿ ನೋಡಿ, ಓಡ್ಬಂದು ತಡ್ದಿದ್ದ, ಇಂಥ ಚಂದುಳ್ಳಿ ಮಕ್ಳು ಮುಕ ನೋಡಕ್ಕಾ, ಇಂಗೆಲ್ಲ ಮಾಡ್ಕಬೇಡ, ಮುಂದೆ ನಿನ್ ಮಕ್ಳೇ ನಿಂಗೆ ನ್ಯಾಯ ಕೊಡುಸ್ತಾರೆ, ಹೋಗು ಅವುಗಳ್ ಮಕ ನೋಡ್ಕಂಡು ಜೀವ್ನ ಮಾಡು ಅಂತ ಬುದ್ಧಿ ಯೋಳಿ ಕಳ್ಸಿದ್ದ. ಅವತ್ತು ಮನಿಗ್ ಬಂದೋಳು ಮಕ್ಳು ಬದ್ಕೇ ನನ್ ಬದ್ಕು ಅನ್ಕಂಡು ಕಾಲ ಹಾಕಿದಿನಿ ಗೊತ್ತಾ' ಅಂತ ಅತ್ಬಿಟ್ಟಿದ್ಳು. ಅವತ್ತು ಮಾತ್ರ ಅವಳ ಕಣ್ಣೀರು ಬಿತ್ತನೆಯ ಸಮಯದಲ್ಲಿ ಕೂರಿಗೆಯ ಒಳಗಿಂದ ಸರಸರನೆ ಸಾಲಿನೊಳಗೆ ಇಳಿವ ರಾಗಿ ಕಾಳಿನಂತೆ, ಕೋಡಿ ಕಿತ್ತ ನೀರಿನಂತೆ ಸುರಿದೇ ಸುರಿದಿದ್ದವು.

'ಇಷ್ಟೆಲ್ಲಾ ನೀಸಿ, ಮಕ್ಕಳೆಲ್ಲಾ ನೇರೂಪಾದ್ರು ಅಂತ ಮತ್ತೆ ಉಸ್ರುಯ್ಯಳವತ್ಗೆ ಹಿರೀ ಮಗಳ ಗಂಡ ಆಲ್ಟಟ್ಯಾಕಾಗಿ ಒಂಟೋಗ್ಬುಟ್ಟ, ಮಗ್ಳಿಗಿಂತ ಯಾವ್ದೂ ಹೆಚ್ಚಲ್ಲ ಅಂತ ಉಟ್ಟ್ ಬಟ್ಟೆಲೇ ಈ ಗಿಜಿಗಿಜಿ ಅನ್ನೋ ಬೆಂಗ್ಳೂರಿಗ್ ಬಂದೆ, ನಮ್ಮಪ್ಪ ಬಾರೆಮ್ಯಾಗ್ಲು ವಡ್ಗಲ್ಲಪ್ಪುಂಗೆ ನಂಗೆ ನೆಮ್ದಿ ಕೊಡ್ಬೇಕು ಅಂತ ಅನ್ಸೇ ಇಲ್ಲ' ಅಂತ ಗೊಣಗುಟ್ತಲೇ ಇದ್ಲು ಗಂಗಮಾಳಕ್ಕ. ಅಷ್ಟರಲ್ಲಿ ಆ ಕಡೆ ಫೋನೆತ್ತಿ ಹಲೋ ಅಂದ್ಲು ಸೊಸೆ.

'ಎದ್ದೇನವ್ವಾ, ಎಷ್ಟೊತ್ತಿಗೋಯ್ತಿರ ಗುಡಿಗೆ? ಮೊದ್ಲು ದೇವ್ರ್ ಮನೆಲಿ ದೀಪ ಹಚ್ಚುಡು, ದೇವ್ರಿಗ್ ಹಣ್ಕಾಯ್ ಮಾಡ್ಸಕೆ ಆ ಕೆಂದಂಗಿ ಮರುದ್ ಕಾಯ್ನೇ ಸುಳುಸ್ಕೊ, ನಮ್ಮನೆದ್ನೇ ಬಾಳೆಗೊನೆ ತಗಂಡೋಗಿ, ಪೂಜೆ ಮುಗುದ್ಮೇಲೆ ಅಲ್ಲೆಯ ರಸಾಯ್ನ ಮಾಡ್ಬೇಕು, ಮುತ್ತುಗ್ದೆಲೆನೋ, ಬಾಳೆದೆಲೆನೊ ಬ್ಯಾಗಿಗಿಟ್ಕೊ ಮರಿಬೇಡ. ಮಗಿಗೆ ಒಂದು ತಾಯ್ತನೂ ಮರಿದಂಗ್ ಕಟ್ಸಿ , ಗುಡಿಗಲ್ವಾ, ನೀವ್ ನೀವೆ ಟೂರುಗೀರು ಓಗ್ವಾಗ ಎಂತಾ ಬಟ್ಟೆನಾರ ಆಕ್ಕಳಿವ್ರಂತೆ, ಇವತ್ತು ಅಚ್ಚಗಟ್ಟಾಗಿ ಸೀರೆ ಉಟ್ಗಂಡೋಗು, ಕೇಳ್ತಾಯ್ತಾ ಮಗಾ ನಾಯೋಳದೂ' ಅಂದ್ಲು ನಯವಾಗಿ.

ಆ ಕಡೆ ಸೊಸೆ 'ಹುಕಣಮ್ಮ, ನಾನೆಲ್ಲಾ ಮಾಡ್ಕೊಂಡ್ ಬರ್ತಿನಿ. ನೀವ್ಯಾಕ್ ತಲೆ ಕೆಡುಸ್ಕತಿರ ನೆಮ್ದಿಯಾಗಿರಿ' ಅಂದು ಫೋನಿಟ್ಲು.

'ತಲೆಕೆಡುಸ್ಕಬಾರ್ದಂತೆ, ಇವ್ಳಿಗ್ ಗ್ಯಾನ ಇದ್ದಿದ್ರೆ ನಾಯಾಕ್ ಯೋಳ್ತಿದ್ದೆ. ಮನೆಮುಂದ್ಲು ಹೂವಿನ್ ಗಿಡ ಎಲ್ಲಾ ಬತ್ಕಂಕುತ್ತವೆ, ಎಂತೆಂತಾ ಗಿಡ್ಗಳಿದ್ದೊ, ಅವೋಗ್ಲಿ ಅತ್ತಗಿ ಆ ನುಗ್ಗೆಗಿಡ, ನಿಂಬೆಗಿಡ, ಪರಂಗ್ಲಿ ಗಿಡುಕ್ಕಾರ ನೀರುಯ್ಯತರಾ! ತಿಪ್ಪೂರಿಂದ ಹಣ್ಣು ತರ್ಕಾರಿ ತತ್ತವೆ, ಬಲು ಎಟ್ಟೆ ಮುಂಡೆವ್ಕೆ, ಮೈ ಮೂಳೆ ಮುರ್ದು, ಎದೆರಕ್ತ ಬಸ್ದು, ಈಟಂಬ್ಲಿ ಕುಡ್ದು ಐನೂರ್ಗಿಡ ತೆಂಗಿನ್ಗಿಡ ಎಬ್ರುಸಿದಿನಿ. ಇರದ್ನ ಉಳುಸ್ಕಳ ಗ್ಯಾನ ಇಲ್ಲ, ದರ್ವೇಸಿಗಳು. ಆಗ ಮನೆ ಹಿತ್ಲಾಗೆ ಸೊಪ್ಪಿನ್ ಮಡಿ ನಳನಳಾ ಅಂತಿರದು, ತುಪ್ದೀರೆಕಾಯಿ, ಚಪ್ಪುದವ್ರೆಕಾಯಿ, ತಲೊಡ್ಕುನ್ಕಾಯಿ ಒಂದೊಂದ್ ಬೆಳಿತಿದ್ನಾ, ಒಂದ್ಸಲ ಒಲುದ್ತಾವ್ಕೋದೆ ಅಂದ್ರೆ ಮಡ್ಲುತುಂಬಾ ಬೆರ್ಕೆಸೊಪ್ ಕುಯ್ಕಬರುವೆ, ಇವ್ಳಿಗ್ ನೋಡಿರೆ ಕೊತ್ಮರಿಸೊಪ್ ಎಂಗಿರುತ್ತೆ ಅಂತಲೇ ಗೊತ್ತಿಲ್ಲ' — ಹಿಂಗೆ ತನ್ನಪಾಡಿಗೆ ತಾನು ಇನ್ನೂ ಏನೇನೋ ಗೊಣಗೊಣ ಅಂತಿದ್ಲೇನೋ... ಒಳಗಡೆಯಿಂದ ಮಗಳು, 'ಅಕ್ಕಾ, ಸೋನುನ ಸ್ಕೂಲಿಗ್ ಬಿಟ್ ಬಾ ಹೋಗಕ್ಕಾ' ಅಂದ್ಲು.

'ಒಂಟಿದಿಯೇನಪಾ ಸೋನು, ಬಾರೋ ಬುಟ್ ಬತ್ತಿನಿ' ಅಂತ ಇವಳು ಕುಂತ ಕಡೆಯಿಂದ ಎದ್ದಳು. ಉಟ್ಟ ಸೀರೆಯಲ್ಲೇ ಹೋಗುವ ಮನಸ್ಸಾದರೂ, ಮೊಮ್ಮಗನ ಜೊತೆಯ ಹುಡುಗರನ್ನು ಕರೆದುಕೊಂಡು ಹೋಗಲು ಬರುವವರು ನೆನಪಾದರು. 'ವರ್ಷುಕೊಂದ್ಸಲ ಓಯ್ತಿದ್ದ ಜಾತ್ರೆಗೂ ನಾನು ಆ ಪಾಟಿ ತಯಾರಾಗೀಯ್ತಿರ್ಲಿಲ್ಲ, ಒಂದ್ ಮಗ ಕರ್ಕಂಡೋಗಕೆ ಬರಕೆ ಅಷ್ಟು ತಯಾರಾಗಿ ಬತ್ತವೆ' ಅನ್ನುತ್ತಾ ಒಳ್ಳೆಯದೊಂದು ಸೀರೆ ಉಟ್ಟು, ತುರುಬು ಕಟ್ಟಿಕೊಂಡು ರೆಡಿಯಾದಳು.

'ಹೇಗಿದೀರಾ ರಾಧಮ್ಮ, ಇವತ್ತು ಟಿಫನ್ ಏನ್ಮಾಡಿದ್ರಿ? ಸಾಂಬಾರ್ ಏನ್ಮಾಡಿದ್ರಿ? ಸಂಜೆ ವಾಕ್ ಬರ್ತೀರಲ್ವಾ?' ಹಿಂಗೆಲ್ಲಾ ಶಾಲೆಯ ಹತ್ತಿರ ಸಿಗುವ ಸಿಟಿ ಹೆಂಗಸರೊಡನೆ ಮಾತಾಡಬೇಕಾದ್ದನ್ನ ಮನಸ್ಸಿನಲ್ಲೇ ಪ್ರ್ಯಾಕ್ಟೀಸು ಮಾಡುತ್ತಾ ಮೊಮ್ಮಗನ ಲಂಚ್ ಬ್ಯಾಗ್ ಕೈಯಲ್ಲಿಡಿದು ಮೆಲ್ಲಗೆ ಮೆಟ್ಟಿಲು ಇಳಿಯತೊಡಗಿದಳು ಗಂಗಮಾಳಕ್ಕ.

ಪ್ರತಿಕ್ರಿಯಿಸಿ: feedback@sudha.co.in